## ಸತ್ಯದರ್ಶನ ಸಾಧನೆ

ಚಂದನವಾಹಿನಿಯಲ್ಲಿ ಪಾವಗಡ ಪ್ರಕಾಶರಾವ್ ಅವರು ಪ್ರಸ್ತುತ ಪಡಿಸುವ ಸತ್ಯದರ್ಶನ 1000 ಸಂಚಿಕೆಗಳನ್ನು ಮೀರಿದೆ. ಇನ್ನೂ ಜನಪ್ರಿಯತೆ ಕಾಯ್ದುಕೊಂಡು ಮುಂದೆ ನಡೆಸುತ್ತಿರುವುದು ಬಹಳ ಸಂತೋಷದ ವಿಷಯ. ಪಾವಗಡ ಪ್ರಕಾಶರಾವ್ ಅವರು ಯಾವುದೇ ವಿಷಯದ ಬಗ್ಗೆ ಎಲ್ಲರಿಗೂ ಮನದಟ್ಟವಾಗುವಂತೆ ವಿಶ್ಲೇಷಣೆ ಮಾಡುವ ಕಲೆಯನ್ನು ಕರಗತಮಾಡಿಕೊಂಡಿದ್ದಾರೆ. ವೀಕ್ಷಕರು ಕೇಳಿದ ಪ್ರಶ್ನೆಗಳಿಗೆ ಅವರು ಅರ್ಥವಾಗುವಂತೆ ವಿವರಿಸಿ ಹೇಳುವ ರೀತಿ ಎಲ್ಲರಿಗೂ ಬಾರದು. ಜ್ಞಾನದಾಯಕವಾಗಿರುವ ಸತ್ಯದರ್ಶನ ಕಾರ್ಯಕ್ರಮ ನಿರಂತರವಾಗಿ ಪ್ರಸಾರವಾಗಲಿ. ಪಾವಗಡ ಪ್ರಕಾಶರಾವ್‌ರವರಿಗೆ ಮತ್ತು ಚಂದನವಾಹಿನಿಗೆ ಅಭಿನಂದನೆಗಳು.

ಪಂಪಾಪತಿ ಹಿರೇಮಠ, ಧಾರವಾಡ

## ಪುರಾಣ ಕಥೆ

ಸ್ಟಾರ್ ಸುವರ್ಣದ 'ಹರ ಹರ ಮಹಾದೇವ'ದಿಂದ ಎಷ್ಟೋ ಪುರಾಣ ಕಥೆಗಳ ವಿಚಾರ, ಚಂದ್ರ ದಕ್ಷನ ಅಳಿಯ, ಚಂದ್ರನಿಗೆ ಇಬ್ಬರು ಹೆಂಡಿರು, ದಕ್ಷನಿಗೆ ಮಕ್ಕಳು ಎಷ್ಟು ಎನ್ನುವಂತಹ ತಿಳಿಯದೇ ಇರುವ ಸಂಗತಿಗಳು ತಿಳಿದುಬಂದವು. ಇತ್ತೀಚೆಗೆ ಪುರಾಣ ಕಥೆಗಳ ಸಿನೆಮಾಗಳು ಅಪರೂಪವಾಗುತ್ತಿದ್ದು, ಈ ಕಥೆಯನ್ನು ಈ ಚಾನೆಲ್‌ನಲ್ಲಿ ಪ್ರಸಾರ ಮಾಡಿ ಜನರಿಗೆ ತಲುಪಿಸುತ್ತಿರುವುದು ಶ್ಲಾಘನೀಯ. ದಕ್ಷ, ಶಿವ, ಸತಿ, ಬ್ರಹ್ಮ, ವಿಷ್ಣು, ಲಕ್ಷ್ಮಿ ಈ ಎಲ್ಲಾ ಮುಖ್ಯ ಪಾತ್ರಗಳೂ ಚೆನ್ನಾಗಿ ಮೂಡಿಬಂದಿವೆ. ಉತ್ತಮವಾದ ಉಡುಗೆ– ತೊಡುಗೆ ಅದ್ಭುತ, ಗ್ರಾಫಿಕ್, ಅನಿಮೇಶನ್ ಅಳವಡಿಸಿರುವುದು ಚೆನ್ನಾಗಿದೆ. ನಾವು ಒಂದು ದಿನವೂ ತಪ್ಪದೇ ವೀಕ್ಷಿಸುತ್ತಿದ್ದೇವೆ.

—ಆರ್. ಎಸ್. ಎಂ. ರಾವ್, ಬೆಂಗಳೂರು

**ವಾರದ ಪತ್ರ**

## ಮೂರ್ಖತನದ ಪರಮಾವಧಿ?

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಮಹಾನದಿ ಧಾರಾವಾಹಿ ಆರಂಭದಲ್ಲಿ ಬಹಳ ಕುತೂಹಲ ಮೂಡಿಸಿತ್ತು. ಆದರೆ ಕೆಲ ಸಂಗತಿಗಳು ಧಾರಾವಾಹಿಗೆ ಮಸಿ ಬಳಿದಂತೆ ಆಗಿದೆ. ಆದರೆ ಕೆಲವು ದಿನಗಳ ಹಿಂದೆ ಮಧುರ ಅಕ್ಕನ ಕೊಲೆ ಸಂಬಂಧವಾಗಿ ತನಿಖೆಗಾಗಿ ಕಾಲೇಜಿಗೆ ಹೋಗಿರುತ್ತಾರೆ. ಅಲ್ಲಿ ಪೊಲೀಸ್ ಅಧಿಕಾರಿ ಮರೆಗುಳಿ ಕಾವಲುಗಾರನ ಜೊತೆ ನಡೆಸಿದ ಸಂಭಾಷಣೆ ಹಾಸ್ಯಾಸ್ಪದವಾಗಿತ್ತು. ಅದು ಹೋಗಲಿ ಎಂದರೆ ಕೊಡೈಕೆನಾಲ್‌ನಿಂದ ಸ್ಟುಡಿಯೋ ಮಾಲಿಕ ಪೊಲೀಸ್‌ಗೆ ಫೋನ್ ಮಾಡಿ ಕೊಲೆಗಾರನ ಸುಳಿವು ನೀಡುತ್ತಾನೆ. ಆದರೆ ಕರ್ನಾಟಕದ ಪೊಲೀಸ್ ಅಧಿಕಾರಿ ಅಲ್ಲಿಗೆ ಹೋಗುವಷ್ಟರಲ್ಲಿ ಸ್ಟುಡಿಯೋದ ಮಾಲಿಕ ಕೊಲೆಯಾಗಿರುತ್ತಾನೆ. ಅತ್ಯಂತ ಮೂರ್ಖತನದ ಸಂಗತಿ ಏನೆಂದರೆ ಅಲ್ಲಿನ ಅಧಿಕಾರಿ ಅಲ್ಲಿನ ಪೊಲೀಸರಿಗೆ ತಿಳಿಸಿದರೂ ಸಹ ಅವರು ಬರುವ ಮೊದಲೆ ವಾಪಸ್ ಆಗುತ್ತಾನೆ. ಇದು ಎಲ್ಲಿಯಾದರೂ ಸಾಧ್ಯವೆ?

—ಎನ್. ಎಸ್. ಚಂದ್ರಶೇಖರ್, ಬೆಂಗಳೂರು

## 'ಮಳ್ಳು ಧಾರಾವಾಹಿ'ಗಳಿಂದ ಮುಕ್ತಿ!

ಇತ್ತೀಚೆಗೆ 'ಸ್ಟಾರ್ ಸುವರ್ಣ ವಾಹಿನಿ'ಯಲ್ಲಿ ಪ್ರತಿ ರಾತ್ರಿ (ಸೋಮವಾರದಿಂದ ಶುಕ್ರವಾರದವರೆಗೆ) 7–30ಕ್ಕೆ 'ಹರಹರ ಮಹಾದೇವ' ಎಂಬ ಧಾರಾವಾಹಿ ಪ್ರಸಾರವಾಗುತ್ತಿದೆ. ಅಗ್ನಿಸಾಕ್ಷಿ, ಭಾಗ್ಯದ ಲಕ್ಷ್ಮಿಬಾರಮ್ಮ.... ಇತ್ಯಾದಿ ಅರ್ಥವಿಲ್ಲದ ಧಾರಾವಾಹಿಗಳಿಂದ ಬೇಸತ್ತ ಪ್ರೇಕ್ಷಕರಿಗೆ ಈ ಧಾರಾವಾಹಿಯಿಂದ ನೆಮ್ಮದಿ! ಹಳ್ಳಿಗಳಲ್ಲಿ, 'ಹರಹರ ಮಹಾದೇವ'ನಿಂದಾಗಿ ಮಳ್ಳು ಧಾರಾವಾಹಿಗಳನ್ನು ಇನ್ನು ಮುಂದೆ ನೋಡಲೇಬೇಕಾಗಿಲ್ಲ– ಈ ಮಳ್ಳು ಮಳ್ಳು ಧಾರಾವಾಹಿಗಳಿಗೆ ಹಾಗೇ ಆಗ್ಬೇಕು' ಎಂದು ಸಾಮಾನ್ಯ ಪ್ರೇಕ್ಷಕರು ಸಂತಸದಿಂದ ಮಾತಾಡಿಕೊಳ್ಳುತ್ತಿದ್ದಾರೆ!

—ನಾರಾಯಣ ಯಾಜಿ, ಶಿರಾಲಿ

## ಚಂದನ ವಾಹಿನಿಯಲ್ಲಿ ಚಲನಚಿತ್ರ

ಈ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಚಲನಚಿತ್ರಗಳು ಸ್ವಲ್ಪ ಸಮಯದಲ್ಲೇ ಪುನಃ ಪುನಃ ಪ್ರಸಾರವಾಗುತ್ತಿರುವುದು ಇತ್ತೀಚೆಗೆ ಸಾಮಾನ್ಯವಾಗಿದೆ. ಪ್ರೇಕ್ಷಕರಿಗೆ ಬೇಸರವುಂಟು ಮಾಡುತ್ತದೆ. ಈ ರೀತಿ ಪುನರಾವೃತ್ತಿಗೆ ತಡೆ ನೀಡಿ ಮೊದಲು ಪ್ರಸಾರಗೊಳ್ಳುತ್ತಿದ್ದ ರೀತಿಯಲ್ಲಿ ಪ್ರಸಾರ ಮಾಡಿದರೆ ಉತ್ತಮ. ಅಲ್ಲದೆ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಮೂರು ಧಾರಾವಾಹಿಗಳು ಸಾವಿರ ಕಂತು ಮೀರಿ ವಿಕ್ರಮ ಸಾಧಿಸಿವೆ. ಇವುಗಳನ್ನು ನಿಲ್ಲಿಸಿ ಬೇರೆಯವರಿಗೆ ಅವಕಾಶ ಕೊಟ್ಟಲ್ಲಿ ಪ್ರೇಕ್ಷಕರು ಬೇರೆ ವಾಹಿನಿ ಕಡೆ ತಿರುಗುವುದು ತಪ್ಪುತ್ತದೆ. ಜೊತೆಗೆ ಚಂದನ ವಾಹಿನಿಯ ಟಿ.ಆರ್.ಪಿ.ಯು ಹೆಚ್ಚಾಗಬಹುದು! ಈ ವಿಚಾರಗಳನ್ನು ಸಂಬಂಧಪಟ್ಟವರು ಪರಿಶೀಲಿಸುವುದು ಸೂಕ್ತ.

—ಎಚ್.ಡಿ. ಲಕ್ಷ್ಮಿನಾರಾಯಣ, ಬೆಂಗಳೂರು

## ಮುಕ್ತಾಯ ಮಾಡಿ

ರಾತ್ರಿ 8 ಗಂಟೆಗೆ ಕನ್ನಡ ಕಲರ್‌ನ 'ಅಗ್ನಿ ಸಾಕ್ಷಿ' ಪ್ರಾರಂಭದಿಂದಲೂ ವೀಕ್ಷಿಸುತ್ತಿರುವ ನಮಗೆ ಇತ್ತೀಚೆಗೆ ಬಹಳ ನಿರಾಶೆಯಾಗುತ್ತಿದೆ. ಏಕೆಂದರೆ ಈ ಧಾರಾವಾಹಿಯ ಖಳನಾಯಕಿ 'ಚಂದ್ರಿಕಾ'ಳಂತೆ ಬಹುಮುಖ ವಿಕೃತ ಮತ್ತು ಕೃತ್ರಿಮ ಬುದ್ಧಿಯುಳ್ಳ ಯಾವ ತಂಗಿಯಾಗಲೀ ಅಥವಾ ಹೆಣ್ಣಾಗಲೀ ಇರುವುದು ಬಹಳ ವಿರಳವೇ ಸರಿ. ಏಕೆಂದರೆ ಯಾವ ಧಾರಾವಾಹಿಯೇ ಆಗಲಿ ಸಮಾಜ ಮುಖಿಯಾಗಿ ಹೆಣ್ಣಿನ ಘನತೆ, ಗೌರವ ಮತ್ತು ಹೆಣ್ಣನ್ನು ಧರಿತ್ರಿ ಎಂದು ಬಿಂಬಿಸುವಾಗ ಈ ಪಾತ್ರವು ಹೆಣ್ಣಿಗೆ ಕಳಂಕ ಪ್ರಾಯ. ಯಾವುದೇ ತೆರನಾದ ಹಿಂಸಾತ್ಮಕ ದೃಶ್ಯ, ದರೋಡೆ ಮೋಸದ ಮತ್ತು ಹೀನಕೃತ್ಯವನ್ನೆಸಗುವ ಧಾರಾವಾಹಿಗಳಿಗೆ ನಿರ್ದೇಶಕರು ಆದಷ್ಟು ಕಡಿವಾಣ ಹಾಕಬಹುದು. ಧಾರಾವಾಹಿಯನ್ನು ದಯವಿಟ್ಟು ಮುಕ್ತಾಯಗೊಳಿಸಿ ಎಂಬುದು ನಮ್ಮ ಮನವಿ.

—ಎನ್.ಎಂ. ಮಾಧವಿ; ಬಿ.ಎ.ಕೆ.ಎಸ್.ಎ.ಎನ್.; ಕೋಂ ನಾಗಬಸವಯ್ಯ ಬೆಂಗಳೂರು

## ಅತಿಯಾದ ಆಂಗ್ಲ ಪದ

ಕಲರ್ಸ್‌ಕನ್ನಡದ 'ಡ್ಯಾನ್ಸಿಂಗ್ ಸ್ಟಾರ್' ನಲ್ಲಿ ಆಂಗ್ಲ ಪದ ಅಧಿಕವಾಗಿದೆ. ನಾವಿರೋದು ಕರ್ನಾಟಕವೋ ಅಥವಾ ವಿದೇಶವೋ ಅರ್ಥವಾಗುತ್ತಿಲ್ಲ. ರೇಡಿಯೋ ವಾಹಿನಿಯಲ್ಲಿ ಆಂಗ್ಲ ಭಾಷೆಯಲ್ಲಿ ಮಾತನಾಡಿ ಎಂದಿದ್ದಕ್ಕೆ 'ನಾನು ಕನ್ನಡಿಗನಾಗಿ ಕನ್ನಡದ ಹೊರತು ಆಂಗ್ಲ ಭಾಷೆ ಮಾತನಾಡುವುದಿಲ್ಲ' ಎಂದು ಹೇಳಿ ರೇಡಿಯೋ ಕಾರ್ಯಕ್ರಮದಿಂದ ಎದ್ದು ಬಂದು ಕನ್ನಡಿಗರ ಮನಗೆದ್ದಿದ್ದ ರಘು ದೀಕ್ಷಿತ್ ಅವರ ಮಡದಿ ಮಯೂರಿಯವರು ಅತಿಯಾಗಿ ಆಂಗ್ಲ ಪದ ಬಳಸುತ್ತಿರುವುದು ಅತ್ಯಂತ ಖೇದಕರ ಸಂಗತಿಯಾಗಿದೆ.

—ಪ್ರಮೋದ ಗಣಪತಿ ಹೆಗಡೆ, ಶಿರಸಿ

## ಅಸಹಜ ಚಿತ್ರಣ

'ಪುಟ್ಟ ಗೌರಿ ಮದುವೆ' ಮತ್ತು 'ಕುಲವಧು' ಧಾರಾವಾಹಿಗಳಲ್ಲಿ ಎಷ್ಟು ತಿಂಗಳಾದರೂ ಗರ್ಭಿಣಿಯರ ದೇಹದಲ್ಲೂ ಏನೊಂದೂ ಬದಲಾವಣೆಯೂ ಕಾಣುತ್ತಿಲ್ಲ. ಪ್ರಪಂಚದಲ್ಲಿ ಯಾವ ಹೆಂಗಸೂ ಗರ್ಭಿಣಿಯೇ ಆಗಿಲ್ಲವೇನೋ ಎಂಬಂತೆ ಮನೆ ಮಂದಿಯೆಲ್ಲಾ ಉಪಚಾರ ಮಾಡುತ್ತಾ ಅವಳು ಹೇಗಿರಬೇಕೆಂಬುದರ ಬಗ್ಗೆ ಧನ್ಯಳೂ ಸೇರಿ ಭಾಷಣ ಮಾಡುತ್ತಿದ್ದಾರೆ. ಆದರೆ ವಚನಾ ದಿನಕ್ಕೆ ಹತ್ತು ಬಾರಿ ಮಹಡಿ ಮೆಟ್ಟಿಲನ್ನು ಹತ್ತಿ – ಇಳಿದು ಮಾಡುತ್ತಿದ್ದರೂ ಯಾರೊಬ್ಬರೂ ಇತ್ತ ಗಮನ ಹರಿಸುವುದಿಲ್ಲ ಏಕೆ? ಕುಲವಧುವಿನಲ್ಲಿ ಹೊಸದಾಗಿ ಹುಟ್ಟಿಸಿರುವ ಹುಚ್ಚನಂತೆ ನಟಿಸುತ್ತಿರುವ ವೈದ್ಯರ ಪಾತ್ರ ಬೇಕಿತ್ತೇ? ಈ ಪಾತ್ರ ವೈದ್ಯ ಕುಲಕ್ಕೇ ಅಪಮಾನ.

—ಶಾಂತಾ ನಾಗರಾಜ್. ಕೆ., ಬೆಂಗಳೂರು

## ಅನಿರೀಕ್ಷಿತ ಅಂತ್ಯ

ಉದಯದ 'ಸಾಕ್ಷಿ' ಚೆನ್ನಾಗಿಯೇ ಬರುತ್ತಿದ್ದರೂ ಅನಿರೀಕ್ಷಿತವಾಗಿ ಅಂತ್ಯ ಕಂಡಿದ್ದು ಬೇಸರವಾಯಿತು.

—ಮೀರಾ ಮೋಹನ್, ಬೆಂಗಳೂರು